(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕ 04.03.2026 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್ ಎಂ ಎಸ್ ವಕೀಲರಿಂದ:-

42. ಹಿಂದೆ ನಿಮ್ಮ ಗಂಡ ಮತ್ತು ಆರೋಪಿ ಗಲಾಟೆ ಮಾಡಿಕೊಂಡಿದ್ದರೇ ಎಂದರೆ ಸಾಕ್ಷಿ ಇಲ್ಲ ಮಾತನಾಡಿಕೊಂಡು ಚೆನ್ನಾಗಿ ಇದ್ದರು. ಹಿಂದೆ ನಿಮ್ಮ ಗಂಡ ಮತ್ತು ಆರೋಪಿ ಜಗಳ ಮಾಡಿಕೊಳ್ಳುತ್ತಿದ್ದರು ಎಂದು ನೀವು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ಎಲ್ಲಿ ಕೆಲಸಕ್ಕೆ ಹೋಗುತ್ತಿದ್ದಿರಿ ಎಂದರೆ ಸಾಕ್ಷಿ ಮೇಸ್ತ್ರಿ ಬಳಿ ಕೆಲಸಮಾಡಿಕೊಂಡಿದ್ದೇನೆ ಅವರು ಹೇಳಿದ ಕಡೆ ಕೆಲಸಕ್ಕೆ ಹೋಗುತ್ತೇನೆ ಎನ್ನುತ್ತಾರೆ. ಸಾಮಾನ್ಯವಾಗಿ ಕಾಫಿ ತೋಟಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಅಲ್ಲಿ ಕಾಫಿ ಕಳೆ ಹೊಡೆಯುವುದು, ಕಸಿ ಮಾಡುವುದು ಮತ್ತು ಹಣ್ಣು ಕುಯ್ಯುವ ಕೆಲಸ ಮಾಡುತ್ತೇನೆ. ಗಂಡಸರು ಮಾಡುವ ಹಾರೆ ಕೆಲಸ ಇತ್ಯಾದಿ ಕೆಲಸಗಳನ್ನು ನಾನು ಮಾಡುವುದಿಲ್ಲ. ನೀವು ಕಸಿ ಮಾಡುವುದು ಕುಡ್ಲು, ಚಾಕು ಮತ್ತು ಕತ್ತಿಯಿಂದ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವೆಲ್ಲಾ ಒಂದೇ ಎನ್ನುತ್ತಾರೆ. ತೋಟ ಮತ್ತು ಗದ್ದೆಗಳಲ್ಲಿ ನೆಲವನ್ನು ಹಗೆಯಲು ಹಾರೆ ಮತ್ತು ಗುದ್ದಲಿಯನ್ನು

ಬಳಸಲಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರೆಡು ಒಂದೇ ಎನ್ನುತ್ತಾರೆ. ಹಾರೆ ಮತ್ತು ಕುಡ್ಲು ಬೇರೆ ಬೇರೆ ವಸ್ತುಗಳು ಎಂದರೆ ಸರಿ. ಹಾರೆ ಮತ್ತು ಗುದ್ದಲಿ ಎರಡು ಒಂದೇ ಎಂದರೆ ಸರಿ.

43. ಆ ದಿನ ನಾನು ಕೆಲಸವನ್ನು ಮುಗಿಸಿ ಮನೆಗೆ ಬಂದಾಗ ನನ್ನ ಗಂಡ ಮನೆಯಲ್ಲಿ ಮಲಗಿದ್ದರು. ಸಾಕ್ಷಿ ಮುಂದುವರೆದು ನಂತರ ಎದ್ದು ಆತ ಮನೆಯ ಮುಂದೆ ಇರುವ ರಸ್ತೆಯ ಕಡೆ ಹೋದರು ಎನ್ನುತ್ತಾರೆ. ನಾನು ಮನೆಗೆ ಹೋದ ಬಳಿಕ ಸುಮಾರು 5 ನಿಮಿಷದವರೆಗೆ ನನ್ನ ಗಂಡ ಮನೆಯಲ್ಲಿ ಇದ್ದರು. ಆ ದಿನ ನನ್ನ ಮಗ ಮನೆಯಲ್ಲಿ ಇರಲಿಲ್ಲ, ಆತ ಬೆಂಗಳೂರಿಗೆ ಹೋಗಿದ್ದನು.

44. ನಿಮ್ಮ ಗಂಡ ಹೊರಗೆ ಹೋದ ಬಳಿಕ ನೀವು ಮನೆಯಿಂದ ಹೊರಗೆ ಬಂದು ನೋಡಿದ್ದೀರಾ ಎಂದರೆ ಸಾಕ್ಷಿ ಕೂಡಲೇ ಹೋಗಿಲ್ಲ ಆದರೆ ಕೂಗಾಡುವ ಶಬ್ದ ಕೇಳಿ ನಾನು ಈಚೆ ಬಂದು ನೋಡಿದಾಗ ಆರೋಪಿ ನನ್ನ ಗಂಡನನ್ನು ಗುದ್ದಲಿಯಿಂದ ಕೊಚ್ಚುತ್ತಿದ್ದನು ಎನ್ನುತ್ತಾರೆ. ನಾನು ಶಬ್ದ ಕೇಳಿ ಮನೆಯಿಂದ ಈಚೆ ಬಂದಾಗ ನಮ್ಮ ಮನೆಯ ಬಾಗಿಲ ಬಳಿ ಯಾರೂ ಇರಲಿಲ್ಲ, ನಾನು ಕೂಗಾಡಿದ ಬಳಿಕ ಬಂದರು.

45. ನೀವು ಕಸಿ ಮಾಡುವ ಕೆಲಸಕ್ಕೆ ಹೋಗುವಾಗ ಬೇಕಾದ ಸಲಕರಣೆಗಳನ್ನು ನೀವೇ ತೆಗೆದುಕೊಂಡು ಹೋಗುತ್ತೀರಾ ಅಥವಾ ಮಾಲೀಕರು ಕೊಡುತ್ತಾರೆಯೇ ಎಂದರೆ ಸಾಕ್ಷಿ ನಾವೇ ತೆಗೆದುಕೊಂಡು ಹೋಗುತ್ತೇವೆ ಎನ್ನುತ್ತಾರೆ. ನನ್ನ ಗಂಡ ಗೂಡ್ಸ್ ಗಾಡಿಯನ್ನು ಓಡಿಸಿಕೊಂಡು ಇದ್ದರು. ನಿಮ್ಮ ಮಗ ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿ. ನಿಮ್ಮ ಮನೆಯಲ್ಲಿ ನೀವು ಒಬ್ಬರೇ ಕೂಲಿ ಕೆಲಸಕ್ಕೆ ಹೋಗುತ್ತಿದ್ದದ್ದು ಎಂದರೆ ಸರಿ. ನಿಮ್ಮ ಕೂಲಿ ಕೆಲಸಕ್ಕೆ ಬೇಕಾಗುವ ಸಲಕರಣೆಗಳನ್ನು ಮಾತ್ರ ನೀವು ನಿಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೀರಿ ಎಂದರೆ ಸರಿ.

46. ನೀವು ಯಾರಿಗಾದರೂ ಫೋನ್ ಮಾಡಿ ಅಥವಾ ಹೆಸರನ್ನು ಹಿಡಿದು ಕೂಗಿ ಕರೆದಿದ್ದೀರಾ ಎಂದರೆ ಸಾಕ್ಷಿ ತಕ್ಷಣಕ್ಕೆ ಯಾರಿಗೂ ಫೋನ್ ಮಾಡಿಲ್ಲ ಮತ್ತು ಹೆಸರನ್ನು ಹಿಡಿದು ಕೂಗಿ ಕರೆದಿಲ್ಲ ಆದರೆ ಕೂಗಾಡಿದೆನು ಎನ್ನುತ್ತಾರೆ. ನಂತರ ಕೂಗಾಡುತ್ತಲೇ ನನ್ನ ಮಗನಿಗೆ ಮತ್ತು ನನ್ನ ಗಂಡನ ಅಣ್ಣನಿಗೆ ಫೋನ್ ಮಾಡಿ ವಿಷಯವನ್ನು ತಿಳಿಸಿದೆನು. ಆ ರೀತಿ ಫೋನ್ ಮಾಡಿದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಸಂಜೆ ಸುಮಾರು 4.30 ಗಂಟೆ ಎನ್ನುತ್ತಾರೆ.

47. ನೀವು ನೋಡಿದಾಗ ಆರೋಪಿ ಎಲ್ಲಿದ್ದನು ಎಂದರೆ ಸಾಕ್ಷಿ ನಾನು ನೋಡಿದಾಗ ಆರೋಪಿ ಗುದ್ದಲಿಯಿಂದ ನನ್ನ ಗಂಡನಿಗೆ ಕೊಚ್ಚುತ್ತಿದ್ದನು, ನಾನು ಅದನ್ನು ನೋಡಿ ಕೂಗಾಡಿದಾಗ ಆತ ಗುದ್ದಲಿಯನ್ನು ನಮ್ಮ ಮನೆಯ ಶೆಡ್ಡಿನ ಹತ್ತಿರ ಹಾಕಿ ಅಲ್ಲಿಂದ ಹೋಗಲು ಹೊರಟನು ಎನ್ನುತ್ತಾರೆ. ಸಾಮಾನ್ಯವಾಗಿ ಹಾರೆ ಅಥವಾ ಗುದ್ದಲಿಯಿಂದ ನೀವು ಹೇಳಿದಂತೆ ಕೊಚ್ಚಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ನಮ್ಮ ಕಡೆ ಅದನ್ನು ಕೊಚ್ಚುವುದು ಎಂದು ಹೇಳುತ್ತಾರೆ ಎನ್ನುತ್ತಾರೆ. ಘಟನೆಯ ಬಗ್ಗೆ ನಮ್ಮ ಪಕ್ಕದ ಮನೆಯವರು ಪೊಲೀಸರಿಗೆ ಫೋನ್ ಮಾಡಿ ತಿಳಿಸಿದ್ದರು ನಂತರ ಪೊಲೀಸರು ಮತ್ತು ಆ್ಯಂಬುಲೆನ್ಸ್ ನವರು ನಮ್ಮ ಮನೆಯ ಬಳಿ ಬಂದರು. ಆ ಸಮಯದಲ್ಲಿ ಪೊಲೀಸರು ಫೋಟೋ ತೆಗೆದುಕೊಂಡರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಪೊಲೀಸರು ಬಂದಾಗ ಆರೋಪಿ ಎಲ್ಲಿದ್ದನು ಎಂದರೆ ಸಾಕ್ಷಿ ಕೊಚ್ಚಿದ ಬಳಿಕ ಆರೋಪಿ ಗುದ್ದಲಿಯನ್ನು ಶೆಡ್ಡಿನಲ್ಲಿ ಬಿಸಾಡಿ ಅಲ್ಲಿಂದ ಹೋಗಲು ಹೊರಟಿದ್ದನು ಆದರೆ ನಾನು ಊರಿನವರಿಗೆ ಆತನನ್ನು ಬಿಡಬೇಡಿ ಎಂದು ಹೇಳಿ ಇರಿಸಿದ್ದೆನು ನಂತರ ಪೊಲೀಸರು ಆರೋಪಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು ಎನ್ನುತ್ತಾರೆ. ಆಗ ಪೊಲೀಸರು ನಿಮ್ಮನ್ನು ವಿಚಾರಿಸಿದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಪೊಲೀಸರು ಬಂದಾಗ ಗುದ್ದಲಿ ಎಲ್ಲಿತ್ತು ಎಂದರೆ ಸಾಕ್ಷಿ ನಮ್ಮ ಮನೆಯ ಮುಂದೆ ಬಿದ್ದಿತ್ತು ಎನ್ನುತ್ತಾರೆ. ಸದರಿ

ಗುದ್ದಲಿಯನ್ನು ಯಾರು ಪೊಲೀಸರಿಗೆ ತೆಗೆದುಕೊಟ್ಟರು ಎಂದರೆ ಸಾಕ್ಷಿ ನಾನು ತೆಗೆದುಕೊಟ್ಟಿದ್ದೇನೆ ಎನ್ನುತ್ತಾರೆ. ಆಗ ಅದು ಎಲ್ಲಿತ್ತು ಎಂದರೆ ಸಾಕ್ಷಿ ನಮ್ಮ ಮನೆಯ ಮುಂದೆ ಇತ್ತು ಎನ್ನುತ್ತಾರೆ. ಗುದ್ದಲಿಗೆ ರಕ್ತವಾಗಿತ್ತೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಗುದ್ದಲಿಯ ತುದಿಗೆ ಮಾತ್ರ ರಕ್ತವಾಗಿತ್ತೇ ಅಥವಾ ಎಲ್ಲಾ ಕಡೆ ಆಗಿತ್ತೇ ಎಂದರೆ ಸಾಕ್ಷಿ ಎಲ್ಲಾ ಕಡೆ ಆಗಿತ್ತು ಎನ್ನುತ್ತಾರೆ. ಅದನ್ನು ನೀವು ಪೊಲೀಸರಿಗೆ ತೆಗೆದುಕೊಟ್ಟಾಗ ರಕ್ತದ ಕಲೆಗಳು ಹಾಗೆಯೇ ಇದ್ದವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮು.ಮಾ.2 ಎಂದು ಗುರುತಿಸಲ್ಪಟ್ಟಿರುವ ಗುದ್ದಲಿಯನ್ನು ಸಾಕ್ಷಿಗೆ ತೋರಿಸಿ ಅದರ ಮೇಲೆ ಎಲ್ಲಿಯೂ ರಕ್ತದ ಕಲೆಗಳು ಇರುವುದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಘಟನೆ ನಡೆದು ಈಗ್ಗೆ 3 ವರ್ಷಗಳಾಗಿವೆ ಎನ್ನುತ್ತಾರೆ. ಫ್ರಾಸಾ.4 ಮತ್ತು ಚಾಸಾ.8 ರವರು ನಿಮ್ಮ ಮಗನ ಸ್ನೇಹಿತರು ಎಂದರೆ ಸರಿ.

48. ಗಲಾಟೆಯಾಗಿದ್ದಾಗಿ, ಅಲ್ಲಿ ಹಲ್ಲೆಯಾಗಿದ್ದಾಗಿ ನಂತರ ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ಬಂದಿದ್ದಾಗಿ ಹೇಳಿದ್ದೀರಿ ಅದೆಲ್ಲಾ ಪ್ರಕ್ರಿಯೆ ಎಷ್ಟು ಸಮಯದವರೆಗೆ ನಡೆಯಿತು ಎಂದರೆ ಸಾಕ್ಷಿ ಸುಮಾರು 15 ನಿಮಿಷ ಎನ್ನುತ್ತಾರೆ. ನಾನು ಫೋನ್ ಮಾಡಿದ ಬಳಿಕ ಫ್ರಾಸಾ.4, ಚಾಸಾ.8 ಮತ್ತು ಫ್ರಾಸಾ.3 ರವರು ಬಂದರು. ಮೊದಲಿಗೆ ಚಾಸಾ.8 ರವರು ಬಂದರು. ಫ್ರಾಸಾ.3 ರವರು ಎಷ್ಟು ಗಂಟೆಗೆ ಬಂದರು ಎಂದರೆ ಸಾಕ್ಷಿ ಅವರು ಆಸ್ಪತ್ರೆಗೆ ಬಂದರು ಎನ್ನುತ್ತಾರೆ. ನಿಮ್ಮ ಗಂಡನಿಗೆ ಒಮ್ಮೆ ಅಪಘಾತವಾಗಿ ಪೆಟ್ಟಾಗಿತ್ತು ಎಂದರೆ ಸರಿಯಲ್ಲ.

49. ನ್ಯಾಯಾಧೀಶರಿಗೆ ಹೇಳಿಕೆ ಕೊಟ್ಟಿದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ಪೊಲೀಸರು ಇದೇ ರೀತಿ ಹೇಳಬೇಕು ಎಂದು ಹೇಳಿಕೊಟ್ಟಿದ್ದರೆ ಎಂದರೆ ಸಾಕ್ಷಿ ಇಲ್ಲ ನಾನೇ ಹೇಳಿಕೆ ನೀಡಿದ್ದೇನೆ ಎನ್ನುತ್ತಾರೆ. ನಿಮ್ಮ ಗಂಡನಿಗೆ ಅಪಘಾತವಾಗಿ ಪೆಟ್ಟಾಗಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

50. ಆರೋಪಿ ಗುದ್ದಲಿಯಿಂದ ನಿಮ್ಮ ಗಂಡನಿಗೆ ಕೊಚ್ಚಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಯಾವುದೇ ಹಾರೆ ಅಥವಾ ಗುದ್ದಲಿಯನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಂಡೇ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮದು ಸ್ವಲ್ಪ ತೋಟವಿದೆ ಅದರಲ್ಲಿ ಅಡಿಕೆ ಬೆಳೆದಿದ್ದೇವೆ ನಮ್ಮ ಮಾವ ತೋಟದಲ್ಲಿ ಕೆಲಸ ಮಾಡಲು ಬೇಕಾಗುವ ಎಲ್ಲಾ ಸಲಕರಣೆಗಳನ್ನು ಇಟ್ಟಿದ್ದರು ಎನ್ನುತ್ತಾರೆ. ಆರೋಪಿಯ ಮೇಲೆ ಇರುವ ವೈಯಕ್ತಿಕ ದ್ವೇಷದಿಂದ ನೀವು ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ